2019 ಕ.ತೀ.ವ 915

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಶ್ರೀ ಮಹಾದೇವ್ ಮತ್ತು ಇನ್ನೊಬ್ಬರು -ವಿರುದ್ಧ- ದಿ ಅಥಣಿ ಪೋಲೀಸ್ ಸಬ್-ಇನ್ಸ್‌ಪೆಕ್ಟರ್, ಅಥಣಿ ಪೋಲೀಸ್ ಠಾಣೆ, ಧಾರವಾಡ ಮತ್ತು ಇತರರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಐಪಿಸಿ ಸೆಕ್ಷನ್ 279, 338ನೇ ಪ್ರಕರಣಗಳಡಿ ಹಾಗೂ ಮೋಟಾರು ವಾಹನಗಳ ಅಧಿನಿಯಮದ 134 ಮತ್ತು 187ನೇ ಪ್ರಕರಣಗಳಡಿ ಶಿಕ್ಷಾರ್ಹ ಅಪರಾಧಕ್ಕಾಗಿ ಅಥಣಿ ಪೋಲೀಸರಿಂದ ಅಪರಾಧ ಸಂ.368/2016ರಲ್ಲಿ ದಾಖಲಿಸಿದ ದೂರನ್ನು ರದ್ದುಪಡಿಸಲು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ. ಮೇಲೆ ಹೇಳಲಾದ ದೂರಿನಲ್ಲಿ 1ನೇ ಅರ್ಜಿದಾರನನ್ನು ಆಪಾದಿತನೆಂದು ತೋರಿಸಿಲ್ಲ. ಹಾಗಿದ್ದರೂ, ಸದರಿ ದೂರುದಾರ ಮತ್ತು ಅಥಣಿಯಲ್ಲಿ ವೃತ್ತಿ ಮಾಡುತ್ತಿರುವ ವಕೀಲನೊಂದಿಗೆ ಶಾಮೀಲಾಗಿ ಗುಪ್ತ ಉದ್ದೇಶದಿಂದ ಪೋಲೀಸರು ದಾಖಲಿಸಿದ ಸುಳ್ಳು ದೂರಾಗಿದೆ ಎಂಬುದರ ಆಧಾರದ ಮೇಲೆ ಅಪರಾಧ ಸಂ.368/2016ರಲ್ಲಿ ದಾಖಲಿಸಿದ ದೂರಿನಿಂದ 1ನೇ ಅರ್ಜಿದಾರನು ಬಾಧಿತನಾಗಿದ್ದಾನೆ.

ಹಾಗಿದ್ದರೂ, ಈ ನ್ಯಾಯಾಲಯವು ಗಾಯಾಳು ಹನುಮಂತ ಅಪಘಾತದ ದಿನಾಂಕದಂದು ಇದ್ದಂತೆ, ಸಿಂಧುವಾದ ಚಾಲನಾ ಪರವಾನಗಿಯನ್ನು ಹೊಂದಿದ್ದನೆ? ಎಂಬ ಬಗ್ಗೆ ಪೋಲೀಸರನ್ನು ವಿಚಾರಿಸಿದಾಗ, ಗಾಯಾಳು ಹನುಮಂತ ಸಿಂಧುವಾದ ಚಾಲನಾ ಪರವಾನಗಿ ಇಲ್ಲದೆಯೇ ಮೋಟಾರ್ ಸೈಕಲ್ಲನ್ನು ಓಡಿಸುತ್ತಿದ್ದನೆಂದು ಮಾಹಿತಿ

*ಕ್ರಿಮಿನಲ್ ಅರ್ಜಿ ಸಂಖ್ಯೆ: 100001/2017, ದಿನಾಂಕ 24ನೇ ಜನವರಿ, 2017.

ನೀಡಿದ್ದು, ಗಾಯಾಳು ಸಿಂಧುವಾದ ಚಾಲನಾ ಪರವಾನಗಿ ಹೊಂದಿರದೆ ಮೋಟಾರು ಸೈಕಲನ್ನು ಓಡಿಸಿ, ಅಪಘಾತಕ್ಕೆ ತಾನೇ ಕಾರಣನಾಗಿದ್ದಾನೆಂದು ಸ್ಪಷ್ಟಪಡಿಸಿದ್ದಾರೆ. ಅದಕ್ಕೂ ಮಿಗಿಲಾಗಿ, ಅಪಘಾತದಲ್ಲಿ ಸಿಲುಕಿದ ವಾಹನವು ಕ್ರೂಸರ್‌ವಾಹನವೆಂದು ತಿಳಿಸಿದ್ದಾನೆ ಮತ್ತು ಅವನು ಒಬ್ಬ ವಕೀಲನಿಂದ (ಎಂವಿಸಿ ಕೇಸುಗಳನ್ನು ಮಾತ್ರ ನಡೆಸುವ) ಸಹಾಯ ಪಡೆದು, ಎಂಎಸಿಟಿ ಮುಂದೆ ಸುಳ್ಳು ಕೇಸು ದಾಖಲಿಸುವ ಮೂಲಕ ತಾನು ಸ್ವಲ್ಪಮಟ್ಟಿನ ನಷ್ಟ ಪರಿಹಾರ ಪಡೆಯಲು ಸಾಧ್ಯವೆಂದು ಖಚಿತಪಡಿಸಿಕೊಂಡು ಅಪಘಾತವಾಗಿ ಒಂದು ದಿನದ ನಂತರ ದೂರು ದಾಖಲಿಸಿದ್ದಾನೆಂದು ಅದರಿಂದ ತಿಳಿಯುತ್ತದೆ. ದೂರಿನಲ್ಲಿ ಹೇಳಲಾದ ವಾಹನದ ಸಂಖ್ಯೆಯು ಕ್ರೂಸರ್‌ವಾಹನದ್ದಲ್ಲ. ಅದು ಮಾರುತಿ ಕಾರಿನದ್ದಾಗಿದ್ದು, ಗಾಯಾಳುವಿನಿಂದ ಮತ್ತು ಅವನಿಗೆ ಸಹಾಯ ಮಾಡಿದ ವಕೀಲನಿಂದ ಹಣ ಕೀಳುವ ಪ್ರಯತ್ನ ಮಾಡಲಾಗಿದೆ. ಪೋಲೀಸ್ ಅಧಿಕಾರಿಗಳ ಮತ್ತು ವಕೀಲ ವನಜೋಲ್‌ನ ವರ್ತನೆ ಬಹಳ ಕೆಟ್ಟದ್ದಾಗಿದೆ. ವಾಸ್ತವವಾಗಿ, ಅಥಣಿ ಪಟ್ಟಣದಲ್ಲಿ ಮೋಟಾರು ವಾಹನ ಪ್ರಕರಣಗಳಲ್ಲಿ ವಕೀಲವೃತ್ತಿ ನಡೆಸುತ್ತಿರುವ ವನಜೋಲ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು, ನ್ಯಾಯಾಲಯವು ಈ ವಿಷಯವನ್ನು ಬಾರ್‌ಕೌನ್ಸಿಲ್‌ಗೆ ಕಳುಹಿಸಲು ಯೋಗ್ಯವಾದ ಪ್ರಕರಣ ಇದಾಗಿದೆ. ಹಾಗಿದ್ದರೂ, ಅವನು ತಪ್ಪನ್ನು ಒಪ್ಪಿಕೊಂಡ ಮತ್ತು ಇನ್ನೆಂದೂ ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ ಎಂದು ಪ್ರಮಾಣ ಮಾಡಿದ ಸಂಗತಿಯನ್ನು ಪರಿಗಣಿಸಿ, ಈ ನ್ಯಾಯಾಲಯವು ಅಪರಾಧ ಸಂ.368/2016 ರಲ್ಲಿ ಅರ್ಜಿದಾರರ ವಿರುದ್ಧ ದಾಖಲಿಸಿದ ಸುಳ್ಳು ದೂರನ್ನು ರದ್ದುಪಡಿಸಿದೆ. ತದನುಸಾರವಾಗಿ, ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರ ಪರ: ಶ್ರೀ ಶಿವರಾಜ್ ಪಿ ಮುಧೋಳ್, ವಕೀಲರು;

1–2ನೇ ಪ್ರತ್ಯರ್ಜಿದಾರರ ಪರ: ಶ್ರೀ ಪ್ರವೀಣ್ ಕೆ. ಉಪ್ಪಾರ್, ಹೆಚ್‌ಸಿಜಿಪಿ,

3ನೇ ಪ್ರತ್ಯರ್ಜಿದಾರರ ಪರ: ಶ್ರೀ ಜಗದೀಶ್ ಪಾಟೀಲ್, ವಕೀಲರು,

4ನೇ ಪ್ರತ್ಯರ್ಜಿದಾರರ ಪರ: ಕೆ.ಎಚ್. ಬಾಗಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

ಐಪಿಸಿ ಸೆಕ್ಷನ್ 279, 338ನೇ ಪ್ರಕರಣಗಳಡಿ ಹಾಗೂ ಮೋಟಾರು ವಾಹನಗಳ ಅಧಿನಿಯಮದ 134 ಮತ್ತು 187ನೇ ಪ್ರಕರಣಗಳಡಿ ಶಿಕ್ಷಾರ್ಹ ಅಪರಾಧಕ್ಕಾಗಿ ಅಥಣಿ ಪೊಲೀಸರಿಂದ ಅಪರಾಧ ಸಂ.368/2016ರಲ್ಲಿ ದಾಖಲಿಸಿದ ದೂರನ್ನು ರದ್ದುಪಡಿಸಲು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ. ಮೇಲೆ ಹೇಳಲಾದ ದೂರಿನಲ್ಲಿ 1ನೇ ಅರ್ಜಿದಾರನನ್ನು ಆಪಾದಿತನೆಂದು ತೋರಿಸಿಲ್ಲ. ಹಾಗಿದ್ದರೂ, ಸದರಿ ದೂರುದಾರ ಮತ್ತು ಅಥಣಿಯಲ್ಲಿ ವೃತ್ತಿ ಮಾಡುತ್ತಿರುವ ವಕೀಲನೊಂದಿಗೆ ಶಾಮೀಲಾಗಿ ಗುಪ್ತ ಉದ್ದೇಶದಿಂದ ಪೊಲೀಸರು ದಾಖಲಿಸಿದ ಸುಳ್ಳು ದೂರಾಗಿದೆ ಎಂಬುದರ ಆಧಾರದ ಮೇಲೆ ಅಪರಾಧ ಸಂ.368/2016ರಲ್ಲಿ ದಾಖಲಿಸಿದ ದೂರಿನಿಂದ 1ನೇ ಅರ್ಜಿದಾರನು ಬಾಧಿತನಾಗಿದ್ದಾನೆ.

2. ಈ ಅರ್ಜಿಗೆ ಕಾರಣವಾದ ಸಂಕ್ಷಿಪ್ತ ಸಂಗತಿಗಳು ಈ ಕೆಳಗಿನಂತಿವೆ:

ಇದರಲ್ಲಿ 1ನೇ ಅರ್ಜಿದಾರನು ನೋಂದಣಿ ಸಂ.ಕೆಎ–48/ಎಂ–904ನ್ನು ಹೊಂದಿರುವ ಮಾರುತಿ ಕಾರಿನ ಒಡೆಯನಾಗಿದ್ದಾನೆ. ಸದರಿ ಕಾರನ್ನು ಅವನ ಕುಟುಂಬವು ಬಳಸಿದೆ. ಅವನ ಪ್ರಕಾರ, ಆ ಕಾರನ್ನು ನಿಯಮಿತವಾಗಿ ಬಳಸುತ್ತಿದ್ದ ವ್ಯಕ್ತಿಯೆಂದರೆ, ಸದರಿ ಕಾರಿನ ನೋಂದಾಯಿತ ಮಾಲೀಕನ ತಮ್ಮ. ತಮ್ಮನಾದ ಸೋಮಲಿಂಗ ಅಥಣಿ ಪೊಲೀಸರಿಂದ ಅಪರಾಧ ಸಂ.368/2016ರಲ್ಲಿ ಆಪಾದಿತನೆಂದು ದೋಷಾರೋಪಣೆ ಮಾಡಲಾಗಿದೆ. ಇದರಲ್ಲಿ 2ನೇ ಅರ್ಜಿದಾರನ ವಿರುದ್ಧದ ಆಪಾದನೆಯನ್ನು 23.09.2016 ರಂದು ಸುಮಾರು ರಾತ್ರಿ 7.45ಕ್ಕೆ ಅಥಣಿ ಪೊಲೀಸರಲ್ಲಿ ದಾಖಲಿಸಿದ ದೂರಿನ ಆಧಾರದ ಮೇಲೆ ಮಾಡಲಾಗಿದೆ. ಸದರಿ ದೂರನ್ನು ಇದರಲ್ಲಿ 4ನೇ ಪ್ರತ್ಯರ್ಜಿದಾರ, ಕೇದಾರಿ ವಾಘರೆಯ ಮಗನಾದ, ಶಿವಪ್ಪ ಎಂಬ ಹೆಸರಿನ ವ್ಯಕ್ತಿಯಿಂದ ದಾಖಲಾಗಿದೆ. ಅವನ ಪ್ರಕಾರ, 22.09.2016 ರಂದು,

ಅವನ ಕಸಿನ್ ಹನುಮಂತ ಎಂಬುವವನು ನೋಂದಣಿ ಸಂ.ಕೆಎ–23/ಇಕೆ–5004ನ್ನು ಹೊಂದಿರುವ ಮೋಟಾರ್ ಸೈಕಲನ್ನು ಓಡಿಸುತ್ತಿದ್ದ. ಅದಕ್ಕೆ ನೋಂದಣಿ ಸಂ.ಕೆಎ–48/ಎಂ–904ನ್ನು ಹೊಂದಿರುವ ಕ್ರೂಸರ್ ವಾಹನ ಡಿಕ್ಕಿ ಹೊಡೆಯಿತು. ಅಪಘಾತವು 22.09.2016 ರಂದು ಸಂಜೆ ಸುಮಾರು 6 ಗಂಟೆಗೆ ಅಥಣಿ–ಪಾರ್ಥನ ಹಳ್ಳಿ ರಸ್ತೆ, ಹಣಜಿ ಉದ್ಯಾನದ ಬಳಿ ನಡೆದಿದೆಯೆಂದು ಹೇಳಲಾಗಿದೆ. ದೂರಿನಲ್ಲಿ, ಅಪಘಾತವಾದ ತಕ್ಷಣ ಕ್ರೂಸರ್ ವಾಹನದ ಚಾಲಕನು ವಾಹನವನ್ನು ನಿಲ್ಲಿಸದೆ ಅಲ್ಲಿಂದ ಪರಾರಿಯಾದನು. ಅದಕ್ಕನುಸಾರವಾಗಿ, ನೋಂದಣಿ ಸಂ.ಕೆಎ–48/ಎಂ–904ನ್ನು ಹೊಂದಿರುವ ಕ್ರೂಸರ್ ವಾಹನದ ಚಾಲಕನನ್ನು ದಸ್ತಗಿರಿ ಮಾಡಲು ಕೋರಿ ದೂರನ್ನು ಸಲ್ಲಿಸಲಾಯಿತೆಂದು ಹೇಳಲಾಗಿದೆ. ದೂರುದಾರನು ಪ್ರತ್ಯಕ್ಷ ಸಾಕ್ಷಿಯೆಂದು ಮತ್ತು ಅವನೂ ಸಹ, ಗಾಯಾಳು ಹನುಮಂತ ಓಡಿಸುತ್ತಿದ್ದ ಮೋಟಾರ್ ಸೈಕಲ್‌ನ ಹಿಂದೆ ವಾಹನದಲ್ಲಿ ಹೋಗುತ್ತಿದ್ದನೆಂದು ಹೇಳಲಾಗಿದೆ ಎಂಬುದನ್ನು ತಿಳಿಸುವ ಅಗತ್ಯವಿದೆ. ಅವನ ಪ್ರಕಾರ, ಅಪಘಾತ ಉಂಟುಮಾಡಿದ ವಾಹನವನ್ನು ಅವನು ನೋಡಿದ್ದಾನೆ ಹಾಗೂ ಅದರ ಚಾಲಕನು ವಾಹನ ನಿಲ್ಲಿಸದೇ ಹೊರಟುಹೋಗಿದ್ದನ್ನು ಗಮನಿಸಿದ್ದಾನೆ. ದೂರಿನಲ್ಲಿ ಗಾಯಾಳು ವ್ಯಕ್ತಿಯನ್ನು ಚಿಕಿತ್ಸೆಗಾಗಿ ಅಥಣಿಯಲ್ಲಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು ಮತ್ತು ಆ ನಂತರ, ಅವನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೀರಜ್‌ಗೆ ಕರೆದೊಯ್ಯಲಾಯಿತೆಂಬುದನ್ನು ಸೂಚಿಸಲಾಗಿದೆ. ದಿನಾಂಕ: 23.09.2016 ರಂದು ದೂರು ದಾಖಲಾಗಿದ್ದರೂ, ನವೆಂಬರ್ 2016 ರವರೆಗೂ ಪೊಲೀಸರು ಏನೂ ಕ್ರಮ ಕೈಗೊಂಡಿಲ್ಲ.

3. ದಿನಾಂಕ: 23.11.2016ಕ್ಕೆ ಸುಮಾರು 4–5 ದಿನಗಳ ಮುಂಚೆ ಮಧ್ಯಾಹ್ನ ಸುಮಾರು 12.30ಕ್ಕೆ, 1ನೇ ಅರ್ಜಿದಾರನು ತೆಲಸಂಗ್ ಗ್ರಾಮಕ್ಕೆ ಗ್ಯಾಸ್ ಸಿಲಿಂಡರ್ ಪಡೆಯಲು ಹೋಗಿದ್ದಾಗ, ಅವನು ತನ್ನ ತಮ್ಮನಾದ 2ನೇ ಅರ್ಜಿದಾರ ಮಾಡಿದ ದೂರವಾಣಿ ಕರೆಯನ್ನು ಸ್ವೀಕರಿಸಿರುತ್ತಾನೆ. ಅಪಘಾತಕ್ಕೆ ಕಾರಣವಾದ ಕ್ರೂಸರ್ ವಾಹನದ ತನಿಖೆಗಾಗಿ ಪೊಲೀಸರು ಅವರ ಗ್ರಾಮಕ್ಕೆ ಬಂದಿದ್ದಾರೆ ಮತ್ತು ಪೊಲೀಸರು ಮಹಾದೇವನ ಜೊತೆ ಮಾತನಾಡಲು ಅಪೇಕ್ಷಿಸಿದ್ದಾರೆ ಹಾಗೂ ಅವನ ದೂರವಾಣಿ ಸಂಖ್ಯೆಯನ್ನು ತೆಗೆದುಕೊಂಡಿದ್ದಾರೆಂಬ ವಿಷಯವನ್ನು ಅವನ

ತಮ್ಮ ತಿಳಿಸಿರುತ್ತಾನೆ. ಆ ನಂತರ ಅವನು ಪೊಲೀಸರು ತನಗೆ ಅಥಣಿಯ ಬಳಿ ಸಂಭವಿಸಿದ ಅಪಘಾತದ ಬಗ್ಗೆ ಮತ್ತು ಅಪಘಾತಕ್ಕೆ ಕಾರಣವಾದ ವಾಹನದ ನೋಂದಣಿ ಸಂಖ್ಯೆಯು ಅವನ ಹೆಸರಿನಲ್ಲಿದೆಯೆಂದು ತಿಳಿಸಿದರೆಂದು ಹಾಗೂ ಆ ಕೂಡಲೇ ಅವನು ತುಬಚಿ ಗ್ರಾಮಕ್ಕೆ ಹೋಗಬೇಕೆಂದು ಕರೆದಿದ್ದಾರೆಂದು ಹೇಳಿರುತ್ತಾನೆ.

4. ಅಷ್ಟೇ ಅಲ್ಲದೆ, ಅವನು ತನ್ನ ಸಹೋದರ ಎಲ್ಲಿದ್ದಾನೆಂಬುದನ್ನು ವಿಚಾರಿಸಿ ಅವನ ಸಹೋದರ ಪಂಚಾಯಿತಿ ಕಚೇರಿಯಲ್ಲಿದ್ದಾನೆಂದು ತಿಳಿದ ನಂತರ ಅಲ್ಲಿಗೆ ಹೋಗಿರುತ್ತಾನೆಂದು ಹೇಳಲಾಗಿದೆ. ಆ ಸಮಯದಲ್ಲಿ ಅವರು ಅಪಘಾತದ ಬಗ್ಗೆ ಮಾಹಿತಿ ಪಡೆದಿರುತ್ತಾರೆ ಮತ್ತು ಸೋಮಲಿಂಗನನ್ನು ಅವನ ಕಾರಿನೊಂದಿಗೆ ಪೊಲೀಸ್‌ಠಾಣೆಗೆ ಕಳುಹಿಸಬೇಕೆಂದು 1ನೇ ಅರ್ಜಿದಾರನಿಗೆ ನಿರ್ದೇಶಿಸಲಾಗಿರುತ್ತದೆ. ಪೊಲೀಸ್ ಠಾಣೆಯಲ್ಲಿ, ಸೈಯದ್ ಎಂದು ಪರಿಚಯಿಸಿಕೊಂಡ ಪೊಲೀಸ್ ಪೇದೆಯು ತನ್ನ ಸಂಪರ್ಕ ಸಂಖ್ಯೆ ನೀಡಿ, ತನ್ನೊಂದಿಗೆ ಸಂಪರ್ಕದಲ್ಲಿರಬೇಕೆಂದು ಅರ್ಜಿದಾರರ ಅಂಕಲ್‌ಗೆ ಸೂಚಿಸಿರುತ್ತಾನೆ. ಹಾಗಿದ್ದರೂ, ಪೊಲೀಸ್ ಸಬ್-ಇನ್‌ಸ್ಪೆಕ್ಟರ್ ಕಾರಿನ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿದ ನಂತರ ಅದು ಅರ್ಜಿದಾರರ ಕಾರಿನಿಂದಾದ ಅಪಘಾತವಲ್ಲವೆಂಬುದನ್ನು ಗಮನಿಸಿ, ಪೊಲೀಸ್ ಪೇದೆ ಸೈಯದ್‌ಗೆ 2ನೇ ಅರ್ಜಿದಾರನನ್ನು ತನ್ನ ಕಾರಿನೊಂದಿಗೆ ಬರಹೇಳಿ, ಸದರಿ ದೂರಿನಲ್ಲಿ 'ಬಿ' ರಿಪೋರ್ಟನ್ನು ದಾಖಲು ಮಾಡಲು ಸೂಚಿಸಿದರೆಂದು ಹೇಳಲಾಗಿದೆ. ಆದರೂ ಪೊಲೀಸ್ ಪೇದೆ ಸೈಯದ್ ಅವರನ್ನು ಹೋಗಲು ಬಿಡಲಿಲ್ಲ ಮತ್ತು ಪೊಲೀಸ್ ಠಾಣೆಯಲ್ಲೇ ಇರಿಸಿಕೊಂಡಿದ್ದನು. ಅದೇ ಸಮಯದಲ್ಲಿ, ಗಾಯಾಳುವನ್ನು ಪೊಲೀಸ್ ಠಾಣೆಗೆ ಕರೆಸಲಾಯಿತು ಮತ್ತು ವಾಹನವನ್ನು ಗುರುತಿಸಲು ಹೇಳಲಾಯಿತು. ಅವನು ತಾನು ವಾಹನದ ಸಂಖ್ಯೆಯನ್ನು ಗಮನಿಸಿದನೆಂದು ಹಾಗೂ ವಾಹನವನ್ನು ನೋಡಿಲ್ಲವೆಂದು ತಿಳಿಸಿರುತ್ತಾನೆ. ಆ ನಂತರ, ಪಿಎಸ್‌ಐ ಮತ್ತು ಪೊಲೀಸ್ ಪೇದೆ ವಾಹನವನ್ನು ಪರೀಕ್ಷಿಸಿದರು ಹಾಗೂ ವಾಹನಕ್ಕೆ ಯಾವುದೇ ಹಾನಿ ಆಗಿಲ್ಲವೆಂಬುದನ್ನು ಗಮನಿಸಿದರು. ಆ ಹಂತದಲ್ಲಿ, ದೂರುದಾರನು, ವನಜೋಲ್ ಎಂಬ ಹೆಸರಿನ ವಕೀಲನಿಂದ ಸಲಹೆ ಪಡೆದಿದ್ದು, ಅವನು ರೂ.40,000/- ಪಾವತಿಸಿದ್ದಾನೆ ಮತ್ತು ಈ ವ್ಯವಹರಣೆಗಳಲ್ಲಿ 3ನೇ ಪ್ರತ್ಯರ್ಜಿದಾರನಾದ ವಕೀಲ

ವನಜೋಲ್‌ನನ್ನು ಭೇಟಿ ಮಾಡಲು ಅರ್ಜಿದಾರರಿಗೆ ಸಲಹೆ ನೀಡಿದ್ದಾನೆಂದು ಗಾಯಾಳು ತನಗೆ ತಿಳಿಸಿದ್ದಾನೆಂದು ದೂರುದಾರನು ಹೇಳಿರುತ್ತಾನೆ. ಸದರಿ ವನಜೋಲ್ ವಕೀಲನು ಹೇಳಲಾದ ಮೊತ್ತವನ್ನು ಗಾಯಾಳುವಿಗೆ ತಾನು ಸಂದಾಯ ಮಾಡಿರುವನೆಂದು ಅರ್ಜಿದಾರರಿಂದ ರೂ.40,000/– ಮೊತ್ತವನ್ನು ಹಾಗೂ ತನಗಾಗಿ ಮತ್ತೆ ರೂ.40,000/– ಹಣಕ್ಕೆ ಬೇಡಿಕೆಯಿಟ್ಟಿದ್ದನೆಂದು ಹೇಳಲಾಗಿದೆ. ಆ ನಂತರ, ಅವನು ಅರ್ಜಿದಾರರಿಗೆ ಅವರ ವಿರುದ್ಧ ದಾಖಲಾದ ದೂರನ್ನು ಕೈಬಿಡುವಂತೆ ಮಾಡುವಲ್ಲಿ ಸಹಾಯ ಮಾಡುತ್ತಿದ್ದನೆಂದು ಹೇಳಲಾಗಿದೆ.

5. ಆ ತರುವಾಯ, ಮೊದಲು 'ಬಿ' ರಿಪೋರ್ಟನ್ನು ಸಲ್ಲಿಸುವಂತೆ ಹೇಳಿದ ಪಿಎಸ್‌ಐ, ಗಾಯಾಳು, ದೂರುದಾರ ಮತ್ತು ಪೊಲೀಸ್ ಪೇದೆ ಸೈಯದ್ ಸೂಚಿಸಿದ ಮೇರೆಗೆ, ಆರೋಪಪಟ್ಟಿಯನ್ನು ಸಲ್ಲಿಸುವುದಕ್ಕಾಗಿ ಔಪಚಾರಿಕ ಕಾರ್ಯಗಳನ್ನು ಪೂರ್ಣಗೊಳಿಸಲು, ಆರ್‌ಟಿಓಗೆ ಬರೆದ ಪತ್ರವನ್ನು ನೀಡಿ, ಅವರಿಗೆ ತಮ್ಮ ವಾಹನವನ್ನು ಪರೀಕ್ಷಿಸಿಕೊಂಡು ಬರಲು ಮತ್ತು ಅಲ್ಲಿಂದ ವರದಿಯನ್ನು ತರಲು ಹೇಳಿದರೆಂದು ಸಹ ಹೇಳಲಾಗಿದೆ. ಇದೆಲ್ಲವನ್ನು ಈ ನ್ಯಾಯಾಲಯದ ಗಮನಕ್ಕೆ ತಂದಾಗ, ಪಿಎಸ್‌ಐ, ಪೊಲೀಸ್ ಪೇದೆ ರೂ. 40,000/– ಮೊತ್ತಕ್ಕೆ ಬೇಡಿಕೆಯಿಟ್ಟು, ಅಸ್ತಿತ್ವದಲ್ಲಿಲ್ಲದ ವಿವಾದವನ್ನು ಇತ್ಯರ್ಥಪಡಿಸಲು ದೂರುದಾರ ಮತ್ತು ಅರ್ಜಿದಾರನ ನಡುವೆ ಮಧ್ಯವರ್ತಿ ಕೆಲಸವನ್ನು ಮಾಡಲು ಪ್ರಯತ್ನಿಸಿದ ವಕೀಲ ಶ್ರೀ ವನಜೋಲ್‌ನನ್ನೂ ಸಹ ಈ ನ್ಯಾಯಾಲಯವು ಸಮನು ಮಾಡಿದೆ. ಈ ಎಲ್ಲಾ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ, ಇಡೀ ಘಟನೆ ಕುರಿತಂತೆ ತಪ್ಪೊಪ್ಪಿಕೊಂಡು, ಕ್ಷಮೆ ಕೋರಿದರು. ಇದೇ ರೀತಿಯ ಸನ್ನಿವೇಶಗಳಡಿ, ಈ ಮೊದಲಿನ ಹಲವಾರು ಸಂದರ್ಭಗಳಲ್ಲಿ, ಈ ನ್ಯಾಯಾಲಯವು ಉನ್ನತ ಪ್ರಾಧಿಕಾರಿಗಳಿಗೆ ವಿಚಾರಣೆ ಕೈಗೊಳ್ಳಲು ನಿರ್ದೇಶಿಸಿದ್ದು, ಆ ಎಲ್ಲಾ ಪ್ರಕರಣಗಳಲ್ಲಿ, ಆ ಹಿರಿಯ ಅಧಿಕಾರಿಗಳು, ಅವರು ಸದರಿ 'ಮಾಫಿಯಾ'ಗೆ ಪಕ್ಷಕಾರರೂ ಆಗಿದ್ದಾರೆಂದು ಸೂಚಿಸಿ, ಕರ್ತವ್ಯಚ್ಯುತರಾದ ಅಧಿಕಾರಿಗಳಿಗೆ ಕ್ಲೀನ್‌ಚಿಟ್ ಕೊಟ್ಟಿದ್ದಾರೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಆದುದರಿಂದ,

ಸದ್ಯದ ಪ್ರಕರಣವನ್ನು ಮುಂದುವರೆಸುವುದು ನ್ಯಾಯಾಲಯದ ಸಮಯವನ್ನು ವ್ಯರ್ಥಗೊಳಿಸಿದಂತೆ ಆಗುತ್ತದೆಂದು ಈ ನ್ಯಾಯಾಲಯವು ಭಾವಿಸಿದೆ.

6. ಹಾಗಿದ್ದರೂ, ಈ ನ್ಯಾಯಾಲಯವು ಗಾಯಾಳು ಹನುಮಂತ ಅಪಘಾತದ ದಿನಾಂಕದಂದು ಇದ್ದಂತೆ, ಸಿಂಧುವಾದ ಚಾಲನಾ ಪರವಾನಗಿಯನ್ನು ಹೊಂದಿದ್ದನೆ? ಎಂಬ ಬಗ್ಗೆ ಪೊಲೀಸರನ್ನು ವಿಚಾರಿಸಿದಾಗ, ಗಾಯಾಳು ಹನುಮಂತ ಸಿಂಧುವಾದ ಚಾಲನಾ ಪರವಾನಗಿ ಇಲ್ಲದೆಯೇ ಮೋಟಾರ್ ಸೈಕಲ್ಲನ್ನು ಓಡಿಸುತ್ತಿದ್ದನೆಂದು ಮಾಹಿತಿ ನೀಡಿದ್ದು, ಗಾಯಾಳು ಸಿಂಧುವಾದ ಚಾಲನಾ ಪರವಾನಗಿ ಹೊಂದಿರದೆ ಮೋಟಾರು ಸೈಕಲನ್ನು ಓಡಿಸಿ, ಅಪಘಾತಕ್ಕೆ ತಾನೇ ಕಾರಣನಾಗಿದ್ದಾನೆಂದು ಸ್ಪಷ್ಟಪಡಿಸಿದ್ದಾರೆ. ಅದಕ್ಕೂ ಮಿಗಿಲಾಗಿ, ಅಪಘಾತದಲ್ಲಿ ಸಿಲುಕಿದ ವಾಹನವು ಕ್ರೂಸರ್‌ವಾಹನವೆಂದು ತಿಳಿಸಿದ್ದಾನೆ ಮತ್ತು ಅವನು ಒಬ್ಬ ವಕೀಲನಿಂದ (ಎಂವಿಸಿ ಕೇಸುಗಳನ್ನು ಮಾತ್ರ ನಡೆಸುವ) ಸಹಾಯ ಪಡೆದು, ಎಂಎಸಿಟಿ ಮುಂದೆ ಸುಳ್ಳು ಕೇಸು ದಾಖಲಿಸುವ ಮೂಲಕ ತಾನು ಸ್ವಲ್ಪಮಟ್ಟಿನ ನಷ್ಟ ಪರಿಹಾರ ಪಡೆಯಲು ಸಾಧ್ಯವೆಂದು ಖಚಿತಪಡಿಸಿಕೊಂಡು ಅಪಘಾತವಾಗಿ ಒಂದು ದಿನದ ನಂತರ ದೂರು ದಾಖಲಿಸಿದ್ದಾನೆಂದು ಅದರಿಂದ ತಿಳಿಯುತ್ತದೆ. ದೂರಿನಲ್ಲಿ ಹೇಳಲಾದ ವಾಹನದ ಸಂಖ್ಯೆಯು ಕ್ರೂಸರ್‌ವಾಹನದ್ದಲ್ಲ. ಅದು ಮಾರುತಿ ಕಾರಿನದ್ದಾಗಿದ್ದು, ಗಾಯಾಳುವಿನಿಂದ ಮತ್ತು ಅವನಿಗೆ ಸಹಾಯ ಮಾಡಿದ ವಕೀಲನಿಂದ ಹಣ ಕೀಳುವ ಪ್ರಯತ್ನ ಮಾಡಲಾಗಿದೆ. ಪೊಲೀಸ್ ಅಧಿಕಾರಿಗಳ ಮತ್ತು ವಕೀಲ ವನಜೋಲ್‌ನ ವರ್ತನೆ ಬಹಳ ಕೆಟ್ಟದ್ದಾಗಿದೆ. ವಾಸ್ತವವಾಗಿ, ಅಥಣಿ ಪಟ್ಟಣದಲ್ಲಿ ಮೋಟಾರು ವಾಹನ ಪ್ರಕರಣಗಳಲ್ಲಿ ವಕೀಲವೃತ್ತಿ ನಡೆಸುತ್ತಿರುವ ವನಜೋಲ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು, ನ್ಯಾಯಾಲಯವು ಈ ವಿಷಯವನ್ನು ಬಾರ್‌ಕೌನ್ಸಿಲ್‌ಗೆ ಕಳುಹಿಸಲು ಯೋಗ್ಯವಾದ ಪ್ರಕರಣ ಇದಾಗಿದೆ. ಹಾಗಿದ್ದರೂ, ಅವನು ತಪ್ಪನ್ನು ಒಪ್ಪಿಕೊಂಡ ಮತ್ತು ಇನ್ನೆಂದೂ ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ ಎಂದು ಪ್ರಮಾಣ ಮಾಡಿದ ಸಂಗತಿಯನ್ನು ಪರಿಗಣಿಸಿ, ಈ ನ್ಯಾಯಾಲಯವು ಅಪರಾಧ ಸಂ.368/2016 ರಲ್ಲಿ ಅರ್ಜಿದಾರರ ವಿರುದ್ಧ ದಾಖಲಿಸಿದ

ಸುಳ್ಳು ದೂರನ್ನು ರದ್ದು ಪಡಿಸಿದೆ. ತದನುಸಾರವಾಗಿ, ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ.

7. ಹಾಗೆ ಮಾಡುವಾಗ, ಈ ನ್ಯಾಯಾಲಯವು ಪೊಲೀಸರಿಗೆ ಮತ್ತು ವಕೀಲ ವನಜೊಲ್‌ಗೆ ಇನ್ನೆಂದೂ ಇಂಥ ಚಟುವಟಿಕೆಗಳಲ್ಲಿ ತೊಡಗದಿರಲು ಎಚ್ಚರಿಕೆ ನೀಡಿರುತ್ತದೆ.

---